# ಜೇಡರ ಬಾಲೆ!

ಬೆಕ್ಕು, ನಾಯಿ, ಮೊಲ, ಮುಂತಾದ ಪ್ರಾಣಿಗಳನ್ನು ಮುದ್ದಿಗಾಗಿ ಸಾಕುವುದನ್ನು ನಾವು ನೋಡಿಯೇ ಇರುತ್ತೇವೆ. ಆದರೆ ವಿಷಪೂರಿತ ಜೇಡಗಳನ್ನು ಸಾಕುತ್ತಿರುವವಳ ಬಗ್ಗೆ ನಿಮಗೆ ತಿಳಿದಿದೆಯೇ?

ಇಂಡೊನೇಷಿಯಾದ ಈ ಜೇಡರ ಬಾಲೆಯು 2010 ರಿಂದ ತನ್ನ ಮನೆಯಲ್ಲಿಯೇ ಜೇಡಗಳನ್ನು ಸಾಕುತ್ತಿದ್ದಾಳೆ! 28 ವರ್ಷ ವಯಸ್ಸಿನ ಮಿಂಗ್ ಕು ಳ ಹತ್ತಿರ 1500 ಕ್ಕೂ ಹೆಚ್ಚು ಜೀವಂತ ಜೇಡಗಳಿವೆ!

ಮಿಂಗ್ ಕು ಳಿಗೆ ಜೇಡಗಳನ್ನು ಸಾಕಬೇಕೆಂಬ ಖಯಾಲಿ ಹುಟ್ಟಿಕೊಂಡಿದ್ದು 7 ವರ್ಷಗಳ ಹಿಂದೆ. ಬ್ಯಾಂಡಂಗ್ ನಗರದಲ್ಲಿರುವ ತನ್ನ ಮನೆಯ ಹಿತ್ತಲಲ್ಲಿ, ಮೋಹಕ ವರ್ಣದ ಜೇಡವೊಂದನ್ನು ನೋಡಿ ಅದರ ಫೋಟೋಗಳನ್ನು ತೆಗೆದಳಂತೆ. ಅದನ್ನು ನೋಡು ನೋಡುತ್ತಿದ್ದಂತೆ ಅದರತ್ತ ಆಕರ್ಷಿತಳಾಗಿ ಸ್ವಲ್ಪ ಕೂಡ ತಡ ಮಾಡದೆ ಜೇಡಗಳನ್ನು ಮಾರುವವರ ಬಗ್ಗೆ ಆನ್‌ಲೈನ್‌ನಲ್ಲಿ ಹುಡುಕಾಟ ನಡೆಸಿದಳಂತೆ. ಒಂದು ಜೇಡವನ್ನು ಖರೀದಿಸಿದ ಮೇಲೆ ಅವುಗಳನ್ನು ಸಾಕಬೇಕೆನ್ನುವ ಕ್ರೇಜ್ ಮತ್ತಷ್ಟು ಹೆಚ್ಚಾಯಿತಂತೆ. ಇದುವರೆಗೂ ಮಿಂಗ್ ಕು, ಜೇಡಗಳ ಖರೀದಿಗಾಗಿಯೇ ಸುಮಾರು 3,525,000 ರೂಪಾಯಿಗಳನ್ನು ವ್ಯಯಿಸಿದ್ದಾಳೆ ಹಾಗೂ 1500 ಜೇಡಗಳನ್ನು ಮನೆಯಲ್ಲಿರುವ ವಿಶೇಷ ಜೇಡರ ಕೋಣೆಯಲ್ಲಿ ಸಾಕುತ್ತಿದ್ದಾಳೆ.

ಮನೆಯಲ್ಲಿಯೇ ಜೇಡಗಳನ್ನು ಸಾಕುತ್ತೇನೆಂದು ತಂದೆ ತಾಯಿಗೆ ಮಿಂಗ್ ಕು ಮೊದಲು ತಿಳಿಸಿದಾಗ, ಅವುಗಳ ಬಗ್ಗೆ ಏನೇನೂ ಗೊತ್ತಿರದ ಪಾಲಕರು ಈಕೆಯದ್ದು ಹುಚ್ಚಾಟಿಕೆ ಎಂದೇ ಭಾವಿಸಿದರಂತೆ. ನಂತರ ಮಿಂಗ್ ಕು ಹಲವಾರು ಪುಸ್ತಕಗಳನ್ನು ಓದಿ ಈ ಅಷ್ಟಪಾದಿಗಳನ್ನು ಬೆಳೆಸುವ ಕ್ರಮ, ವಂಶಾಭಿವೃದ್ಧಿ, ಅವುಗಳಿಂದ ಹೇಗೆ ರಕ್ಷಿಸಿಕೊಳ್ಳಬೇಕು ಎಂಬೆಲ್ಲಾ ವಿಷಯಗಳನ್ನು ತಿಳಿದುಕೊಂಡಳಂತೆ. ಹಾಗೆಯೇ ತಂದೆತಾಯಿಗಳಿಗೂ ಇವುಗಳ ಬಗ್ಗೆ ಅರಿವು ಮೂಡಿಸಿದಳಂತೆ. ತಾವು ಹೆದರಿಕೊಂಡರೂ ಮಗಳ ಅತೀವ ಆಸಕ್ತಿಗೆ ಅಡ್ಡಬಾರದ ಪಾಲಕರು ಅವುಗಳನ್ನು ಮನೆಯಲ್ಲಿ ಸಾಕಲು ಜಾಗ ಕೊಟ್ಟರಂತೆ.

ಮನೆಯ ಒಂದು ಕೋಣೆಯಲ್ಲಿ, ಗಾಜಿನ ಜಾಡಿ, ಗಾಜಿನ ತೊಟ್ಟಿ ಮುಂತಾದವುಗಳಲ್ಲಿ ಈ ಊರ್ಣನಾಭಗಳನ್ನಿರಿಸಿ ಅವುಗಳನ್ನು ಬಲು ಜತನದಿಂದ ಸಾಕುತ್ತಿದ್ದಾಳೆ ಮಿಂಗ್ ಕು. ಈಕೆಯ ಸಂಗ್ರಹದಲ್ಲಿ ಬಹುತೇಕ ಎಲ್ಲಾ ಜಾತಿಯ ಜೇಡಗಳಿವೆ. ಅವುಗಳ ಆಹಾರ, ನೀರು ಆರೋಗ್ಯ ಮುಂತಾದವುಗಳನ್ನು ನೋಡಿಕೊಳ್ಳಲು ದಿನಕ್ಕೆ 10 ತಾಸುಗಳನ್ನು ವ್ಯಯ ಮಾಡುತ್ತೇನೆಂದು ಮಾಧ್ಯಮ ಒಂದರಲ್ಲಿ ಹೇಳಿ ಕೊಂಡಿದ್ದಾಳೆ. ಸಾಕಿದ ಜೇಡಗಳಿಂದ 14 ಬಾರಿ ಕಚ್ಚಿಸಿಕೊಂಡು ಹಲವಾರು ಬಾರಿ ಆಸ್ಪತ್ರೆಗೆ ಭೇಟಿಯಿತ್ತರೂ ಜೇಡಗಳ ಮೇಲಿರುವ ಪ್ರೇಮ ಈಕೆಗೆ ಒಂದಿಷ್ಟೂ ಕಡಿಮೆಯಾಗಿಲ್ಲ. ಅಷ್ಟೇ ಅಲ್ಲ ಜನರು ರಾಣಿ ಜೇಡ ಎಂದು ಹೆಸರಿಟ್ಟಿರುವುದು ಮಿಂಗ್ ಕು ಳಿಗೆ ಬಲು ಹೆಮ್ಮೆ ಎನ್ನಿಸಿದೆಯಂತೆ.

■ ವಿದ್ಯಾ ವಿ. ಹಾಲಭಾವಿ



